# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 944 |
| ವಿಧಾನ ಪರಿಷತ್ತು ಸದಸ್ಯರ ಹೆಸರು | : ಡಾ\|\| ಆರತಿ ಕೃಷ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : 15.12.2025 |
| ಉತ್ತರಿಸುವ ಸಚಿವರು | : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ನಾಲ್ಕು ಚಕ್ರ ವಾಹನ ಹೊಂದಿದ್ದ ಬಿ.ಪಿ.ಎಲ್ ಪಡಿತರ ಚೀಟಿದಾರರ ರೇಷನ್ ಕಾರ್ಡ್ ಅನ್ನು ಹಿಂದಿನ ಸರ್ಕಾರ ರದ್ದು ಪಡಿಸಿದ್ದು, ಇದರಿಂದಾಗಿ ಇಂತಹ ಕುಟುಂಬಗಳ ಸದಸ್ಯರು ಮಾರಣಾಂತಿಕ ಖಾಯಿಲೆಗಳಿಗೊಳಗಾದಾಗ ಬಿ.ಪಿ.ಎಲ್ ಕಾರ್ಡ್ ಗೆ ನೀಡುತ್ತಿದ್ದ ಆರೋಗ್ಯ ಸೌಲಭ್ಯಗಳಿಂದ ವಂಚಿತರಾಗುತ್ತಿರುವುದರಿಂದ ಅವರುಗಳ ಅನುಕೂಲಕ್ಕಾಗಿ ಅರ್ಹರಿಗೆ ಬಿಪಿಎಲ್ ಪಡಿತರ ಚೀಟಿಯನ್ನು ವಾಪಸ್ ಒದಗಿಸಿ ಕೊಡುವ ಅಥವಾ ಪರ್ಯಾಯ ವ್ಯವಸ್ಥೆಯನ್ನು (ಅಂದರೆ ಯಶಸ್ವಿನಿ ಕಾರ್ಡ್‌ನಂತೆ ಯೋಜನೆಗಳ ಸಮರ್ಪಕ ಅನುಷ್ಠಾನ) ಮಾಡುವ ಬಗ್ಗೆ ಸರ್ಕಾರ ಕ್ರಮವಹಿಸುವುದೇ? | ಆಯುಕ್ತರು, ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ರವರ ಪತ್ರ ದಿನಾಂಕ: **12.07.2021**ರಲ್ಲಿ ಸಾರಿಗೆ ಇಲಾಖೆಯಿಂದ ನೀಡಲಾಗಿದ್ದ ನಾಲ್ಕು, ಚಕ್ರದ ವಾಹನಗಳ ಮಾಹಿತಿಯನ್ನು ಈ ಕೆಳಕಂಡ ಮಾರ್ಗಸೂಚಿ /ಷರತ್ತುಗಳಂತೆ ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲು ಸೂಚಿಸಲಾಗಿತ್ತು.<br>* ಸಾರಿಗೆ ಇಲಾಖೆ ನೀಡಿರುವ ನಾಲ್ಕು, ಚಕ್ರದ ಕುಟುಂಬಗಳು ಅಂತ್ಯೋದಯ ಅನ್ನ/ಆದ್ಯತಾ ಪಡಿತರ ಚೀಟಿಗಳನ್ನು ಹೊಂದಿರುವ ಮಾಹಿತಿಯನ್ನು ಭೌತಿಕವಾಗಿ ಸ್ಥಳ ಪರಿಶೀಲನೆ ಮಾಡಿ, ಅಂತಹ ಪಡಿತರ ಚೀಟಿದಾರರ ಮೇಲೆ ಕಾರಣ ಕೇಳುವ ನೋಟಿಸ್ ಜಾರಿ ಮಾಡಿ ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಬೇಕು.<br>ಸ್ಥಳ ಪರಿಶೀಲನೆ ನಡೆಸದೇ ಅಂತ್ಯೋದಯ ಅನ್ನ/ಆದ್ಯತಾ ಪಡಿತರ ಚೀಟಿಯಿಂದ ಆದ್ಯತೇತರ ಪಡಿತರ ಚೀಟಿಗಳನ್ನು ಪರಿವರ್ತಿಸಿದರೆ, ಅದರಿಂದಾಗುವ ಸಾಧಕ-ಭಾದಕಗಳನ್ನು ಆಹಾರಶಿರಸ್ತೇದಾರರು/ ಆಹಾರ ನಿರೀಕ್ಷಕರು ಹೊಣೆಗಾರರನ್ನಾಗಿ ಮಾಡಲಾಗುವುದು.<br>ನಾಲ್ಕು ಚಕ್ರದ ವಾಹನ ಹೊಂದಿರುವ ಅನರ್ಹ ಪಡಿತರ ಚೀಟಿಗಳನ್ನು ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಿ, ಅಂತಹ ಪಡಿತರ ಕುಟುಂಬಗಳು ಕಂಡು ಬಂದ ಹಿನ್ನೆಲೆಯಲ್ಲಿ ದಂಡ ವಿಧಿಸಿ ಕ್ರಮಕೈಗೊಳ್ಳತಕ್ಕದ್ದು.<br>ನಾಲ್ಕು ಚಕ್ರದ ವಾಹನ ಹೊಂದಿರುವ ಅನರ್ಹ ಪಡಿತರ ಚೀಟಿಗಳ ಮೇಲೆ ಕೈಗೊಂಡ ಕ್ರಮದ ಬಗ್ಗೆ ಗೂಗಲ್ ಶೀಟ್‌ನಲ್ಲಿ ಮಾಹಿತಿಯನ್ನು ಸಲ್ಲಿಸತಕ್ಕದ್ದು.<br>ಮೇಲ್ಕಂಡ ಆದೇಶದ ಮೇರೆಗೆ ಆಯುಕ್ತರು, ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ರವರ ಪತ್ರ |

| | | | |
|---|---|---|---|
| | | | ದಿನಾಂಕ: **24.08.2021** ರನ್ವಯ ನಾಲ್ಕು ಚಕ್ರ ವಾಹನದ ವೈಯಕ್ತಿಕ ವಾಹನ ಹೊಂದಿರುವ ಅಂತ್ಯೋದಯ ಅನ್ನ /ಆದ್ಯತಾ ಪಡಿತರ ಚೀಟಿಗಳನ್ನು ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸುವ ಆದೇಶವನ್ನು ತಡೆಹಿಡಿಯಲಾಗಿರುತ್ತದೆ. |

**ಇ-ಆನಾಸ 331 ಡಿಆರ್ಎ 2025**

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು
ಮಾಪನಶಾಸ್ತ್ರ ಇಲಾಖಾ ಸಚಿವರು